| ಕ್ರ.ಸಂ. | ಚರ್ಚಿಸಬೇಕಾದ ವಿಷಯಗಳು |
|---|---|
| | ದೌರ್ಜನ್ಯ ಪ್ರಕರಣಗಳಲ್ಲಿ ವಹಿಸಲಾದ ಕ್ರಮಗಳು.<br>c) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸ್ಥಾಪಿತವಾಗಿರುವ ಈ ವರ್ಗದವರ ವಿದ್ಯಾರ್ಥಿ ನಿಲಯಗಳ ಮೇಲ್ವಿಚಾರಣೆ ನಡೆಸುವುದು.<br>d) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಈ ವರ್ಗದವರ ಕಲ್ಯಾಣ/ಗಂಗಾ ಕಲ್ಯಾಣಕ್ಕಾಗಿ ಅನುದಾನಗಳು, ಸಾಲಗಳು ಮತ್ತು ಸಹಾಯ ಧನಗಳನ್ನು ವಿತರಿಸಿರುವುದರ ಬಗ್ಗೆ ಮಾಹಿತಿ ಪಡೆಯುವುದು. |
| 16) | ಪ್ರವಾಸೋದ್ಯಮ :<br>a) ಗ್ರಾಮ ಪಂಚಾಯತಿ ವ್ಯಾಪ್ತಿಯ ಪ್ರವಾಸಿ ತಾಣಗಳ ಗುರುತಿಸುವಿಕೆ ಮತ್ತು ಅವುಗಳ ಪಾರಂಪರಿಕ ಮಹತ್ವವನ್ನು ತಿಳಿಯುವುದು.<br>b) ಪ್ರವಾಸಿ ತಾಣಗಳ ಅಭಿವೃದ್ಧಿಪಡಿಸುವಿಕೆ (ಸಂಪರ್ಕ ಮಾರ್ಗಗಳು/ ಕುಡಿಯುವ ನೀರು / ಶೌಚಾಲಯ / ತಂಗುದಾಣಗಳು / ಇಳಿದಾಣಗಳು / ಸಾರಿಗೆ / ಇತ್ಯಾದಿ)<br>c) ಪ್ರವಾಸಿ ತಾಣಗಳ ಅಭಿವೃದ್ಧಿಪಡಿಸುವಿಕೆಯಲ್ಲಿ ಇತರೆ ಇಲಾಖೆಗಳೊಂದಿಗೆ ಒಗ್ಗೂಡಿಸಿದ ಮಾದರಿಗಳ (convergence model) ಅನುಸರಿಸುವಿಕೆ.<br>d) ಪ್ರವಾಸೋದ್ಯಮ ನೀತಿಗಳ ಚರ್ಚೆ.<br>e) ಪ್ರವಾಸೋದ್ಯಮ ಚಟುವಟಿಕೆಗಳ ರೂಪಿಸುವಿಕೆ.<br>f) ಪ್ರವಾಸೋದ್ಯಮ ಆಕರ್ಷಣೆಗಳ ರೂಪಿಸುವಿಕೆ.<br>g) ಪ್ರವಾಸಿ ಮಾರ್ಗದರ್ಶಕರು, ಹಸಿರು ಪೊಲೀಸಿಂಗ್, ಕಾವಲು ವ್ಯವಸ್ಥೆ, ಜೀವರಕ್ಷಕ ತಂಡಗಳ ನಿಯೋಜನೆ ಅಥವಾ ಸೇವೆ ಪಡೆದುಕೊಳ್ಳುವಿಕೆ.<br>h) ಪ್ರವೇಶಾತಿ ಶುಲ್ಕಗಳು, ವಾಹನ ನಿಲುಗಡೆ ಶುಲ್ಕಗಳ ವಿಧಿಸುವಿಕೆ.<br>i) ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವ ನೀತಿಗಳಡಿ ಪ್ರವಾಸಿ ತಾಣಗಳು ಅಥವಾ ಪ್ರವಾಸೋದ್ಯಮವನ್ನು ಯೋಜನಾಬದ್ಧಗೊಳಿಸುವುದು. |
| 17) | ಸಣ್ಣ ಪ್ರಮಾಣದ ಕೈಗಾರಿಕೆಗಳು ಮತ್ತು ಗ್ರಾಮೀಣ ಕೈಗಾರಿಕೆಗಳು :<br>a) ಗುಡಿ ಕೈಗಾರಿಕೆಗಳ ಸ್ಥಾಪನೆಯಲ್ಲಿ ಉತ್ತೇಜನ ನೀತಿಗಳ ಅಳವಡಿಕೆ.<br>b) ಉಪಯುಕ್ತ ಕೌಶಲ್ಯ ಹಾಗೂ ತಂತ್ರಜ್ಞಾನ ಹಂಚುವಿಕೆ ಪ್ರಕ್ರಿಯೆಗಳು.<br>c) ತರಬೇತಿ ಮತ್ತು ಉತ್ಪಾದನಾ ಕೇಂದ್ರಗಳ ಸ್ಥಾಪಿಸುವಿಕೆ ಮತ್ತು ನಿರ್ವಹಣೆ.<br>d) ಮಾರುಕಟ್ಟೆ ವ್ಯವಸ್ಥೆಗಳು.<br>e) ಗ್ರಾಮೋದ್ಯೋಗ ಮತ್ತು ಗುಡಿ ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಲವು ಇಲಾಖೆಗಳ ನಡುವೆ ಸಂಪರ್ಕ ಕೊಂಡಿಯಾಗಿ ಕಾರ್ಯನಿರ್ವಹಿಸುವುದು.<br>f) ಉದ್ಯಮ ಶೀಲತಾ ಕಾರ್ಯಕ್ರಮಗಳ ಆಯೋಜನೆ.<br>g) ಸಬ್ಸಿಡಿ ಆಧಾರಿತ ಸಾಲಗಳ ಹಂಚುವಿಕೆ. |
| 18) | ಗ್ರಾಮೀಣ ವಸತಿ :<br>a) ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರಾಯೋಜಿತ ವಿವಿಧ ವಸತಿ ಯೋಜನೆಗಳ ಬಗ್ಗೆ.<br>b) ನಿಗದಿಪಡಿಸಲಾದ ಗುರಿಗಳು.<br>c) ಫಲಾನುಭವಿ ಗುರುತಿಸುವಿಕೆಯಲ್ಲಿ ಗ್ರಾಮ ಸಭೆಗಳ ಪಾತ್ರ.<br>d) ಫಲಾನುಭವಿ ಗುರುತಿಸುವಿಕೆಯಲ್ಲಿ ಪಾರದರ್ಶಕ ಪ್ರಕ್ರಿಯೆಗಳ ಅನುಸರಿಸುವಿಕೆ. |

| ಕ್ರ.ಸಂ. | ಚರ್ಚಿಸಬೇಕಾದ ವಿಷಯಗಳು |
|---|---|
| | e) ಮನೆ ನಿರ್ಮಾಣ ಪ್ರಗತಿಗಳು ಹಾಗೂ ಗುಣಮಟ್ಟ ಖಾತ್ರೀಕರಣ.<br>f) ಅನುದಾನ ಬಿಡುಗಡೆ ವಿಷಯಗಳು. |
| 19) | **ಕುಡಿಯುವ ನೀರು ಪೂರೈಕೆ :**<br>a) ಗ್ರಾಮಗಳ ಜನತೆಗೆ ಶುದ್ಧ ಕುಡಿಯುವ ನೀರು ಪೂರೈಕೆಯಲ್ಲಿ ಇರುವ ಹೊಣೆಗಾರಿಕೆಗಳು.<br>b) ಕುಡಿಯುವ ನೀರು ಪರೀಕ್ಷೆಗಳು ಹಾಗೂ ಕುಡಿಯಲು ಯೋಗ್ಯವಾಗಿರುವ ಬಗ್ಗೆ ದೃಢೀಕರಣ.<br>c) ನೀರು ಪೂರೈಕೆ ಯೋಜನೆಗಳ ಮಂಜೂರಾತಿ, ಅನುಷ್ಠಾನ ಮತ್ತು ಗುಣಮಟ್ಟ ಖಾತ್ರೀಕರಣ.<br>d) ಶುದ್ಧ ಕುಡಿಯುವ ನೀರು ಘಟಕಗಳ ಸ್ಥಾಪನೆ.<br>e) ಕುಡಿಯುವ ನೀರು ಯೋಜನೆಗಳು ಹಾಗು ಶುದ್ಧ ನೀರು ಘಟಕಗಳ ಅನುಷ್ಠಾನ ಇಲಾಖೆಗಳಿಂದ ಗ್ರಾಮ ಪಂಚಾಯತಿಗೆ ಹಸ್ತಾಂತರವಾಗುವ/ ವಾಗಿರುವ ಬಗ್ಗೆ ಮತ್ತು ಅವುಗಳ ನಿರ್ವಹಣೆ.<br>f) ನೀರಿನ ಅಸಮರ್ಪಕ ಬಳಕೆ ಹಾಗೂ ವ್ಯರ್ಥಗೊಳಿಸುವ ಗ್ರಾಮೀಣ ಜನತೆಯ ಹವ್ಯಾಸಗಳನ್ನು ಬದಲಾಯಿಸುವಲ್ಲಿ ಅನುಸರಿಸಲಾದ ಕ್ರಮಗಳು.<br>g) ಕುಡಿಯುವ ನೀರು ಯೋಜನೆಗಳ ನಿರ್ವಹಣೆಯಲ್ಲಿ ಉತ್ತರದಾಯಿ ಕ್ರಮಗಳು. |
| 20) | **ಬಡತನ ನಿರ್ಮೂಲನೆ :**<br>a) ಗುರುತಿಸಲಾದ ಬಡವರ ಕೌಶಲ್ಯ ವರ್ಧನೆ.<br>b) ಉದ್ಯೋಗ ಖಾತ್ರಿ ಅಧಿನಿಯಮದ ಮೂಲಕ ಉದ್ಯೋಗ ಒದಗಿಸುವಿಕೆ.<br>c) ಉದ್ಯೋಗ ಮೇಳಗಳ ಆಯೋಜನೆ.<br>d) ತಂತ್ರಜ್ಞಾನ ತರಬೇತಿ ಕಾರ್ಯಕ್ರಮಗಳ ಆಯೋಜನೆ.<br>e) ಸರ್ಕಾರದ ಸಹಾಯಧನ, ಸಾಲಗಳು, ಪ್ರೋತ್ಸಾಹ ಧನಗಳ ಒದಗಿಸುವಿಕೆಯಲ್ಲಿ ಸಂಪರ್ಕ ಕೊಂಡಿಯಾಗಿ ಕಾರ್ಯನಿರ್ವಹಿಸುವುದು. |
| 21) | **ವಿಪತ್ತು ನಿರ್ವಹಣೆ:**<br>a) ವಿಪತ್ತು ನಿರ್ವಹಣೆಯಲ್ಲಿ ಮುಂಜಾಗರೂಕತಾ ಕ್ರಮಗಳು.<br>b) ವಿಪತ್ತುಗಳಲ್ಲಿ ಹಾನಿಗೊಳಗಾದ ಪ್ರಾಣ ಮತ್ತು ಆಸ್ತಿಗಳಿಗೆ ಪರಿಹಾರ ಧನಗಳ ವಿತರಣೆ.<br>c) ವಿಪತ್ತು ನಿರ್ವಹಣೆಯಲ್ಲಿ ಮೂಲ ಸೌಕರ್ಯಗಳ ಸೃಜನೆ.<br>d) ಗ್ರಾಮ ಪಂಚಾಯತಿ ಮಟ್ಟದಲ್ಲಿ ವಿಪತ್ತು ನಿರ್ವಹಣೆ ಕೇಂದ್ರಗಳ ಸ್ಥಾಪನೆ ಮತ್ತು ನಿರ್ವಹಣೆ.<br>e) ವಿಪತ್ತು ನಿರ್ವಹಣೆಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವಗಳನ್ನು ಉತ್ತೇಜಿಸುವುದು.<br>f) ವಿಪತ್ತು ನಿರ್ವಹಣೆಗಾಗಿ ಸಾರ್ವಜನಿಕ ದೇಣಿಗೆಗಳ ಸಂಗ್ರಹ ಮತ್ತು ವಿನಿಯೋಗ. |
| 22) | **ಕ್ರೀಡೆಗಳು ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :**<br>a) ಗ್ರಾಮೀಣ ಕಲಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಆಯೋಜನೆಗೆ ಉತ್ತೇಜನಗಳು.<br>b) ಕುಶಲಕಲೆ ಉತ್ಪನ್ನಗಳ ದಾಖಲೀಕರಣ, ಉತ್ಪಾದನೆಗೆ ಉತ್ತೇಜನ, ಮಾರುಕಟ್ಟೆ ವ್ಯವಸ್ಥೆ.<br>c) ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ ಮತ್ತು ಪುನಃಶ್ಚೇತನ.<br>d) ಸಾಂಸ್ಕೃತಿಕ ಕೇಂದ್ರಗಳ ಸ್ಥಾಪನೆ. |

| ಕ್ರ.ಸಂ. | ಚರ್ಚಿಸಬೇಕಾದ ವಿಷಯಗಳು |
|---|---|
| | e) ಕುಶಲಕಲಾ ಮೇಳ, ಯುವಜನ ಮೇಳ, ಕ್ರೀಡಾ ಮೇಳಗಳ ಆಯೋಜನೆ.<br>f) ಧಾರ್ಮಿಕ ಸಾಮರಸ್ಯ ಮೂಡಿಸುವ ಕಾರ್ಯಕ್ರಮಗಳ ಆಯೋಜನೆ.<br>g) ಉತ್ತಮ ಸಾಧಕರುಗಳಿಗೆ ಪ್ರಶಸ್ತಿ ಬಹುಮಾನ ವಿತರಣೆ ಅಥವಾ ಪ್ರಧಾನಗಳು. |
| 23) | ಮಾರುಕಟ್ಟೆ, ಪರಿಷೆ ಮತ್ತು ದನಗಳ ಜಾತ್ರೆಗಳು :<br>a) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ದನಗಳ ಜಾತ್ರೆಗಳ ಆಯೋಜನೆ ಮತ್ತು ಪ್ರಚುರಪಡಿಸುವಿಕೆ.<br>b) ಉತ್ತಮ ತಳಿಗಳ ರಾಸುಗಳು ಸುಲಭವಾಗಿ ಲಭ್ಯವಾಗುವ ಅವಕಾಶಗಳನ್ನು ಕಲ್ಪಿಸುವುದು.<br>c) ಮಾರುಕಟ್ಟೆ, ಪರಿಷೆ, ದನಗಳ ಜಾತ್ರೆಗಳ ಆಯೋಜನೆಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದು. |
| 24) | ನೈರ್ಮಲ್ಯ:<br>a) ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳಲ್ಲಿನ ಪ್ರತಿ ಕುಟುಂಬಗಳನ್ನು ಸಮೀಕ್ಷೆ ಮಾಡಿ ಅಂಕಿ ಅಂಶಗಳನ್ನು ದಾಖಲಿಸುವುದು.<br>b) ಶೌಚಾಲಯ ರಹಿತ ಕುಟುಂಬಗಳ ಗುರುತಿಸುವಿಕೆ.<br>c) ಶೌಚಾಲಯ ನಿರ್ಮಾಣಕ್ಕಾಗಿ ಸಹಾಯಧನಗಳ ಒದಗಿಸುವಿಕೆ.<br>d) ಶೌಚಾಲಯ ಬಳಕೆಯ ಹವ್ಯಾಸಗಳನ್ನು ರೂಢಿಸುವಲ್ಲಿ ಜಾಗೃತಿ ಮೂಢಿಸುವುದು.<br>e) ಬಯಲು ಬಹಿರ್ದೆಸೆ ಮುಕ್ತ ಗ್ರಾಮಗಳನ್ನಾಗಿಸುವಲ್ಲಿ ಶ್ರಮಿಸುವುದು.<br>f) ತಿಪ್ಪೆಗುಂಡಿಗಳ ಸ್ಥಳಾಂತರ.<br>g) ಚರಂಡಿ ವ್ಯವಸ್ಥೆಗಳ ಸಮರ್ಪಕ ನಿರ್ವಹಣೆ.<br>h) ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆ ಘಟಕಗಳ ಸ್ಥಾಪನೆ.<br>i) ತ್ಯಾಜ್ಯ ವಿಲೇವಾರಿಯಲ್ಲಿ ಸುಧಾರಿತ ತಂತ್ರಜ್ಞಾನ ಮಾದರಿಗಳನ್ನು ಅನುಸರಿಸುವುದು.<br>j) ನೈರ್ಮಲ್ಯ ಅರಿವು ಶಿಬಿರಗಳ ಆಯೋಜನೆ.<br>k) ಶುಚಿತ್ವ ಹವ್ಯಾಸಗಳನ್ನು ರೂಢಿಸಿಕೊಳ್ಳಲು ಗ್ರಾಮೀಣ ಜನತೆಗೆ ಜಾಗೃತಿ ಮೂಡಿಸುವುದು. |
| 25) | ಅಂಕಿ ಅಂಶಗಳ ನಿರ್ವಹಣೆ ಮತ್ತು ಯೋಜನೆ:<br>a) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಿಗೆ ಸಂಬಂಧಿಸಿದಂತೆ ಎಲ್ಲಾ ವಿಷಯಗಳ ಅಂಕಿ ಅಂಶಗಳ ಕ್ರೋಢೀಕರಣ<br>(ಭೌಗೋಳಿಕ ಪ್ರದೇಶ, ಅರಣ್ಯ ಪ್ರದೇಶ, ಜನಸಂಖ್ಯೆ, ಕೃಷಿ ಭೂಮಿ, ಅನಕ್ಷರಸ್ಥರು, ಕೈಗಾರಿಕೆಗಳು, ಕುಟುಂಬಗಳು, ಇತ್ಯಾದಿ)<br>b) ದೂರದೃಷ್ಟಿ ಯೋಜನೆಗಳ ತಯಾರಿಸುವಿಕೆ ಮತ್ತು ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ಅಂಕಿ ಅಂಶಗಳನ್ನು ಬಳಸಿಕೊಳ್ಳುವಿಕೆ.<br>c) ಗ್ರಾಮ ಪಂಚಾಯತಿ ಮಟ್ಟದ ಯೋಜನೆಗಳ ತಯಾರಿಕೆ.<br>d) ದತ್ತಾಂಶ ಮತ್ತು ಮಾಹಿತಿ ಸಂಗ್ರಹಿಸುವಿಕೆ.<br>e) ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಯೋಜನೆಗಳ ಅನುಷ್ಠಾನದ ಮೇಲ್ವಿಚಾರಣೆ ಮತ್ತು ಗುಣಮಟ್ಟ ಖಾತ್ರೀಕರಣ.<br>f) ಯೋಜನೆಗಳ ಮೌಲ್ಯಮಾಪನ. |
| 26) | ಸಹಕಾರ:<br>a) ಗ್ರಾಮ ಪಂಚಾಯತಿ ವ್ಯಾಪ್ತಿಯ ಸಹಕಾರ ಸಂಘಗಳು, ಹಾಲು ಉತ್ಪಾದಕ ಘಟಕಗಳು |

| ಕ್ರ.ಸಂ. | ಚರ್ಚಿಸಬೇಕಾದ ವಿಷಯಗಳು |
|---|---|
| | ಮತ್ತು ಸಹಕಾರಿ ಬ್ಯಾಂಕುಗಳ ಅಂಕಿ ಅಂಶಗಳ ಸಂಗ್ರಹಣೆ.<br>b) ಗ್ರಾಮ ಪಂಚಾಯತಿ ವ್ಯಾಪ್ತಿಯ ಸಹಕಾರ ಸಂಘಗಳು, ಹಾಲು ಉತ್ಪಾದಕ ಘಟಕಗಳು ಮತ್ತು ಸಹಕಾರಿ ಬ್ಯಾಂಕುಗಳ ಸಮರ್ಪಕ ಕಾರ್ಯನಿರ್ವಹಣೆಯಲ್ಲಿರುವ ಸವಾಲುಗಳು, ಸಮಸ್ಯೆಗಳು ಮತ್ತು ಪರಿಹಾರ ಕ್ರಮಗಳು.<br>c) ಸಬ್ಸಿಡಿ ಆಧಾರಿತ ಸಾಲಗಳ ವಿತರಣೆಗಳು ಮತ್ತು ಆರ್ಥಿಕ ಪುನಃಶ್ಚೇತನ ಕಾರ್ಯಕ್ರಮಗಳು.<br>d) ಸಾಲಮನ್ನಾ ಯೋಜನೆಗಳು. |
| 27) | **ಆದಾಯೋತ್ಪತ್ತಿ ಚಟುವಟಿಕೆಗಳು** |
| 28) | **ಜ್ಞಾನ ನಿರ್ವಹಣೆ:**<br>a) ಸರ್ಕಾರದ ಎಲ್ಲಾ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸುವುದು.<br>b) ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳ ಆಯೋಜನೆ.<br>c) ಗ್ರಾಮ ಪಂಚಾಯತಿ ಮಟ್ಟದ ಗ್ರಾಮಗಳ ಇತಿಹಾಸ, ಸಂಸ್ಕೃತಿ ಮತ್ತು ಪರಂಪರೆಯನ್ನು ದಾಖಲಿಸುವುದು.<br>d) ಮಾನವ ಅಭಿವೃದ್ಧಿ ಸೂಚ್ಯಾಂಕಗಳ ತುಲನೆ.<br>e) ಮಾನವ ಅಭಿವೃದ್ಧಿ ಸಮೀಕ್ಷೆಗಳು.<br>f) ದತ್ತಾಂಶಗಳ ಸುಲಭ ಲಭಿಸುವಿಕೆ. |

**ಗ್ರಾಮ ಪಂಚಾಯತ್ ಇತರೆ ವಿಷಯಗಳು :**

- ಆಸ್ತಿ ತೆರಿಗೆ ಸಂಗ್ರಹಣೆ, ವಿಸ್ತರಣೆ ಹಾಗೂ ಪರಿಷ್ಕರಣೆ.
- ಶುದ್ಧ ಕುಡಿಯುವ ನೀರು ಸರಬರಾಜು.
- ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.